ನಕ್ಕ ಶಶಾಂಕ್ ಮುಖ ನೆನಪಾಯಿತು.

ಯಾವತ್ತೂ ನಮ್ಮ ನಡುವೆ ಇಷ್ಟು ನಿಶ್ಶಬ್ದವಿಲ್ಲ. ಈ ಆರು ತಿಂಗಳಿನಿಂದ ನಾವು ಒಬ್ಬರಿಗೊಬ್ಬರು ಹೊಸಬರಾಗಿಬಿಟ್ಟಿದ್ದೇವೆ. ನಮ್ಮಿಬ್ಬರ ನಡುವೆ ಅಗಾಧ ಮೌನ ಆವರಿಸಿದೆ.

ಸಾಮಾನ್ಯವಾಗಿ ನಾನು ಹಗಲೆಲ್ಲ ಮನೆಯ ಹಿತ್ತಲಿನ ಸುಂದರ ಗಿಡಗಳ ನಡುವೆಯೇ ಕಾಲ ಕಳೆಯುತ್ತೇನೆ. ಉಯ್ಯಾಲೆಯಲ್ಲಿ ದಿಂಬಿಗೆ ತಲೆಯಿಟ್ಟು ಪುಸ್ತಕ ಓದುತ್ತ ಬಟಾಣಿ, ಕಡಲೆ ತಿನ್ನಬೇಕೆಂಬುದು ನನ್ನ ಬಾಲ್ಯದ ಬಯಕೆ. ಈಗ ಇಷ್ಟಪಟ್ಟು ಕಟ್ಟಿಸಿರುವ ಉಯ್ಯಾಲೆಯಿದ್ದರೂ ಅಧಿಕ ಭಾರದಿಂದ ಮಕ್ಕಳಾಗುತ್ತಿಲ್ಲವೆಂಬ ಅನುಮಾನದಿಂದ ಕಡಲೆ, ಬಟಾಣಿ ತಿನ್ನಲಾಗುತ್ತಿಲ್ಲ.

ನಡುವೆ ಯಾವಾಗಲಾದರೂ ಬೇಜಾರಾದಾಗ ಸಸಿ ನೆಡಲು ಗುಂಡಿ ಅಗೆಯುವುದು, ತರಕಾರಿ ಗಿಡಗಳನ್ನು ಸಂರಕ್ಷಿಸುವುದು, ಆ ಗಿಡ ಕಂಡ ತಕ್ಷಣ ದಂಡಯಾತ್ರೆ ಮಾಡುತ್ತಲೋ, ಸಿಹಿಯಾದ ಹಣ್ಣುಗಳನ್ನು ತಿನ್ನಲು ನನ್ನ ಕಣ್ಣು ತಪ್ಪಿಸಿ ಕಳ್ಳತನದಿಂದ ನಿಶ್ಶಬ್ದವಾಗಿ ನನ್ನ ಹಿಂದೆಯೇ ಬರುವ ಅಳಿಲುಗಳು ನಾನು ತಲೆ ತಿರುಗಿಸುತ್ತಿದ್ದಂತೆಯೇ ಓಡುವುದನ್ನು ನೋಡಿ ನಗುವುದರಲ್ಲೇ ಸಮಯ ಕಳೆಯುತ್ತದೆ.

ಆರು ತಿಂಗಳಿನಿಂದ ಮನೆಯಲ್ಲೇ ಇರುವುದರಿಂದ ಶಶಾಂಕ್‌ಗೆ ಏನಾದರೂ ಬೇಕಾಗಬಹುದೆಂದು ಹಿತ್ತಲಿಗೆ ಹೋಗದೆ ಮನೆಯೊಳಗೇ ಹೆಚ್ಚಾಗಿ ಇರುವುದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ.

ಈಗ ಹಠಾತ್ತಾಗಿ ಇವಾಕ್ಯುಯೇಷನ್ ವಾರ್ನಿಂಗ್ ಮೊಬೈಲಿಗೆ ಬಂದು, ಊರಿನಿಂದ ನೆರವಿಗಾಗಿ ತಂಡಗಳು ಬಂದಿವೆ. ಮನೆ ಬಿಟ್ಟು ಎಲ್ಲೋ ಇರಬೇಕಾಗಿರುವುದರಿಂದ ನನಗೆ ಆತಂಕ ಹೆಚ್ಚಾಗುತ್ತಿದೆ.

ತಕ್ಷಣ ಮನೆ ಬಿಟ್ಟುಹೋಗುವಂತೆಯೂ, ಅತ್ಯಗತ್ಯವಿರುವ ವಸ್ತುಗಳನ್ನು ಒಂದೋ ಎರಡೋ ಸೂಟ್‌ಕೇಸಿನಲ್ಲಿಟ್ಟುಕೊಂಡು ಸರಿಯಾಗಿ ಒಂದು ಗಂಟೆ ಒಳಗಾಗಿ ಇವಾಕ್ಯುಯೇಷನ್ ಮಾಡಬೇಕೆಂದು ಅಗ್ನಿಶಾಮಕ ದಳದ ಆದೇಶವಾಗಿದೆ. ಈ ಗಂಟೆಯೊಳಗೆ ಎಮರ್ಜೆನ್ಸಿ ಸೈರನ್ ಕೂಗಿ ಹೋಗಬೇಕಾಗಿ ಬಂದರೆ ಎಲ್ಲರೂ ತಾವಿರುವ ಜಾಗದಲ್ಲಿಯೇ ಇರಬೇಕೆಂದೂ, ತಾವೇ ಎಲ್ಲರನ್ನೂ ಹುಷಾರಾಗಿ ಕರೆದೊಯ್ದು ಬೇರೆಡೆಗೆ ಸ್ಥಳಾಂತರ ಮಾಡುವುದಾಗಿಯೂ ಅಗ್ನಿಶಾಮಕ ದಳ ಸಹಾಯಕ ತಂಡದವರು ಹೇಳಿದ್ದಾರೆ.

ನನಗೆ ಕೈಕಾಲು ಆಡುತ್ತಿಲ್ಲ.

ಮುಖ್ಯವಾದುದೆಂದರೆ ಏನು ತೆಗೆದುಕೊಳ್ಳಬೇಕು? ಅದೂ ಒಂದೋ ಎರಡೋ ಸೂಟ್‌ಕೇಸಿನಲ್ಲಿ. ಪಾಸ್‌ಪೋರ್ಟ್, ವೀಸಾ ಡಾಕ್ಯುಮೆಂಟ್ಸ್, ಸರ್ಟಿಫಿಕೇಟ್‌ಗಳು, ಲ್ಯಾಪ್‌ಟಾಪ್ ಇಡುವಷ್ಟರಲ್ಲಿ ಒಂದರಲ್ಲಿ ಅರ್ಧ ತುಂಬಿಹೋಯಿತು. ನಿಜಕ್ಕೆ ಏನು ಬಿಡಬೇಕು? ಮನೆಯಲ್ಲಿರುವ ಪ್ರತಿ ವಸ್ತುವೂ ಪ್ರಿಯವೇ.

ಬಾಡಿಗೆ ಮನೆಯ ಹಳೆಯ ಫರ್ನಿಚರ್, ಹಳೆಯ ವಸ್ತುಗಳು ಸ್ವಂತ ಮನೆಗೆ ತರಬೇಡವೆಂದು ಶಶಾಂಕ್ ಹೇಳಿದಾಗ ನಮ್ಮಿಬ್ಬರಿಗೂ ದೊಡ್ಡ ಜಗಳವೇ ಆಯಿತು. 'ಬಂಗಾರದಂತಹ ಫರ್ನಿಚರ್ ನಿನಗೇನು ಮಾಡಿದೆ?' ಎಂದೆ.

'ದೊಡ್ಡ ಬಂಗಾರ. ಎಲ್ಲ ಸೆಕೆಂಡ್ ಹ್ಯಾಂಡ್ ತಗಡು ಸಾಮಾನುಗಳೇ' ವ್ಯಂಗ್ಯವಾಗಿ ಹೇಳಿದ.

'ನಾನು ಅಮೆರಿಕಕ್ಕೆ ಬಂದ ಹೊಸದರಲ್ಲಿ ತಮ್ಮ ಸಂಬಳ ಎಷ್ಟೋ ನೆನಪು ಮಾಡಿಕೊಂಡು ಮಾತನಾಡಿ ಸರ್. ಇಗೋ ಈ ಸೆಕೆಂಡ್ ಹ್ಯಾಂಡ್ ಡೈನಿಂಗ್ ಟೇಬಲ್, ಈ ಕುರ್ಚಿಗಳು, ಈ ಗ್ರೈಂಡರ್ – ಈ ತುಕ್ಕು ಸಾಮಾನುಗಳೇ ನಮ್ಮನ್ನು ಅಪ್ಪಿಕೊಂಡದ್ದು' ಎಂದೆ ಗಟ್ಟಿಯಾಗಿಯೇ.

'ತುಂಬಾ ಅಪ್ಪಿಕೊಂಡಿವೆ. ಹೊಸ ಗ್ರೈಂಡರ್ ತೆಗೆದುಕೊಳ್ಳಲಾಗದಿದ್ದರೆ ಇಡ್ಲಿ ತಿನ್ನುವುದನ್ನು ಬಿಡಬೇಕು' ಎಂದ.

ಶಶಾಂಕ್ ವಿತಂಡವಾದ ಶುರು ಮಾಡಿದರೆ ಅದಕ್ಕೆ ಆದಿ ಅಂತ್ಯವಿರುವುದಿಲ್ಲವೆಂದು ಗೊತ್ತು ನನಗೆ. ಮನೆಯಲ್ಲಿರುವ ಪ್ರತಿ ವಸ್ತುವೂ ದಿನಗಟ್ಟಲೆ ಅಲೆದಾಡಿ ಇಷ್ಟಪಟ್ಟು ಕೊಂಡಿರುವವೇ.

ಇರುವ ಒಂದು ಗಂಟೆ ಸಮಯದಲ್ಲಿ ಏನು ಜೋಡಿಸಿಕೊಳ್ಳಬೇಕು? ನಮ್ಮ ಮದುವೆ ಆಲ್ಬಂ, ನನ್ನ ಚಿಕ್ಕಂದಿನ ಫೋಟೊಗಳು, ನಾವಿಬ್ಬರೂ ಮದುವೆಗೆ ಮೊದಲು ಬರೆದುಕೊಂಡ ಪ್ರೇಮಪತ್ರಗಳು, ನನ್ನ ಡೈರಿಗಳು...

ಗಬಗಬನೆ ಮೆದುಳಿನಲ್ಲಿ ಓಡುತ್ತಿರುವ ಮುಖ್ಯ ಲಿಸ್ಟ್ ಜೋಡಿಸತೊಡಗಿದೆ. ಗಾಬರಿಯಿಂದ ಜೋಡಿಸುತ್ತಿದ್ದರೆ ಬೆವರು ಸುರಿಯುತ್ತಿದೆ. ಶಶಾಂಕ್ ತನ್ನ ಆಫೀಸಿನ ವಸ್ತುಗಳು, ವಾರಕ್ಕೆ ಆಗುವಷ್ಟು ಬಟ್ಟೆಗಳನ್ನು ಎರಡು ನಿಮಿಷದಲ್ಲಿ ಜೋಡಿಸಿಕೊಂಡು ಹಾಲಿಗೆ ಹೋದ.

ಕ್ಲಾಜೆಟ್‌ಗೆ ಬರುವ ವೇಳೆಗೆ ನನಗೆ ತಲೆ ಓಡುತ್ತಿಲ್ಲ.

ಮದುವೆಯ ರೇಷ್ಮೆ ಸೀರೆಯಿಂದ ಹಿಡಿದು, ಇತ್ತೀಚೆಗೆ ಕೊಂಡ ಫ್ಯಾಷನಬಲ್ ಈವನಿಂಗ್ ಡಿನ್ನರ್ ಗೌನ್... ಯಾವುದನ್ನು ಬಿಡುವುದು? ಕನಿಷ್ಠ ಆರೇಳು ದೊಡ್ಡ ಸೂಟ್‌ಕೇಸುಗಳಲ್ಲಿ ತುಂಬಿಕೊಳ್ಳಬೇಕಾದಂತಹವು ಇವೆ. ಶಶಾಂಕ್ ಯಾರೊಂದಿಗೋ ಫೋನಿನಲ್ಲಿ ಮಾತನಾಡುತ್ತ, 'ಪ್ಲೀಸ್ ಗಿವ್ ಫ್ಯೂ ಮೋರ್ ಮಿನಿಟ್ಸ್, ಜಸ್ಟ್ ಟೆನ್ ಮೋರ್ ಮಿನಿಟ್ಸ್...'

ಆ ಫೋನ್ ಇಟ್ಟ ಕೂಡಲೇ ಎಷ್ಟು ಜೋರಾಗಿ ಕೂಗು ಹಾಕುತ್ತಾನೆಂದು ಗೊತ್ತು.

ಗಾಬರಿಯಿಂದ ಎದುರಿಗೆ ಕಂಡ ನಾಲ್ಕು ಪ್ಯಾಂಟ್, ಶರ್ಟ್‌ಗಳೊಂದಿಗೆ ಮದುವೆ ಸೀರೆ ಮಡಿಕೆಗಳು ನಲುಗಿಹೋಗುತ್ತಿದ್ದರೂ ಹಾಗೇ ಸೂಟ್‌ಕೇಸಿನಲ್ಲಿ ತುರುಕಿದೆ.

'ಏನು ಮಾಡುತ್ತಿದ್ದೀಯ ಇಷ್ಟು ಹೊತ್ತು? ಫೋನ್ ಚಾರ್ಜರ್, ಲ್ಯಾಪ್‌ಟಾಪ್ ಚಾರ್ಜರ್ ಎನ್ನುತ್ತ ಬಿಡದೆ ಎಲ್ಲ ತೆಗೆದುಕೊಂಡಿದ್ದೀಯಾ?' ಕೋಪದಿಂದ ಕೇಳಿದ.

ಎಂಟ್ರೆನ್ಸ್‌ನಲ್ಲಿದ್ದ ಸುಂದರವಾದ ಆರ್ಟ್ ಪೀಸ್ ಕೈಯಿಂದ ಸವರಿ ಮೌನವಾಗಿ ಹೊರಗೆ ನಡೆದೆ.

ಒಂದು ನಿಮಿಷ ಎಂದು ಹಾಲಿನಿಂದ ಹಿತ್ತಲಿಗೆ ಹೋಗುವ ಗ್ಲಾಸ್ ಡೋರ್ ಮುಚ್ಚುತ್ತ ಉಯ್ಯಾಲೆಯತ್ತ ನೋಡಿದೆ. ತುದಿಯಲ್ಲಿ ಕುಳಿತಿದ್ದ ಅಳಿಲೊಂದು ತಲೆ ತಿರುಗಿಸಿ ಭಯದಿಂದ ನೋಡಿತು. ಅದು ನನ್ನತ್ತ ನಿಸ್ಸಹಾಯಕವಾಗಿ ನೋಡುತ್ತಿರುವಂತೆ ಭಾಸವಾಯಿತು.

ಹೊರಗೆ ಭೂಮಿ ಅಂತ್ಯವಾಗುತ್ತಿರುವಂತೆ ದಟ್ಟವಾಗಿ ಧೂಳು ಹಿಡಿದ ಆಕಾಶದಲ್ಲಿ ಕಿರಣಗಳು ಕಳೆದುಕೊಂಡು ಕೆಂಪು ಬಣ್ಣದ ರಿಂಗಿನಂತೆ ಕಾಣುತ್ತಿದ್ದಾನೆ ಸೂರ್ಯ.

ವಾರದ ಮೊದಲು ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಕಾಳ್ಗಿಚ್ಚು ಹೊತ್ತಿಕೊಂಡು ನೂರಾರು ಮನೆಗಳು ಸುಟ್ಟುಹೋಗಲಾರಂಭಿಸಿದವು.

ದಟ್ಟವಾದ ಹೊಗೆ ಕೆಲವು ನೂರು ಮೈಲಿವರೆಗೆ ಆವರಿಸಿತು. ಅದರೊಂದಿಗೆ 101 ಡಿಗ್ರಿ ಫಾರನ್ ಹೀಟ್ ಉಷ್ಣಾಂಶದೊಂದಿಗೆ ಹೀಟ್ ವೇವ್ ಕ್ಯಾಲಿಫೋರ್ನಿಯಾವನ್ನು ಆವರಿಸಿತು. ಆ ಪರಿಣಾಮವಾಗಿ ನಾವಿರುವ ಬೇ ಏರಿಯಾದಲ್ಲಿ ಬೆಟ್ಟವಿರುವ ಪ್ರತಿ ಕಡೆಯೂ ಕಾಳ್ಗಿಚ್ಚು ಹೊತ್ತಿಕೊಳ್ಳಲಾರಂಭಿಸಿ ಆರಿಸಲು ಸಾಧ್ಯವಿಲ್ಲದಷ್ಟು ವೇಗವಾಗಿ ಸುತ್ತಮುತ್ತಲ ಎಲ್ಲ ಪ್ರಾಂತ್ಯಗಳಿಗೂ ವಿಸ್ತರಿಸಲಾರಂಭಿಸಿತು.

ನಮಗೆ ಎರಡು ಮೈಲಿ ದೂರದಲ್ಲಿ ಬೆಟ್ಟ ಹೊತ್ತಿಕೊಳ್ಳುತ್ತಿರುವುದು, ನಮ್ಮ ಮನೆ ಕೂಡ ರಿಸ್ಕ್ ಜೋನ್‌ನಲ್ಲಿ ಇರುವುದರಿಂದ ಇವಾಕ್ಯುಯೇಷನ್ ಆರ್ಡರ್ ಬಂದೇಬಿಟ್ಟಿತು.

ಮನೆಗಳು ಹೊತ್ತಿಕೊಂಡದ್ದನ್ನು ಟೀವಿಯಲ್ಲಿ ನೋಡಿಯೇ ಭಯದಿಂದ ತಲೆ ದಿಮ್ಮೆನ್ನ ತೊಡಗಿತ್ತು. ಹಾಗಿರುವಾಗ ನಮ್ಮ ಮನೆ ರಿಸ್ಕ್ ಜೋನ್‌ನಲ್ಲಿರುವ ವಿಷಯ ತಿಳಿಯುತ್ತಿದ್ದಂತೆ ಹೊಟ್ಟೆಯಲ್ಲಿ ಸಂಕಟ, ತಳಮಳ ಶುರುವಾಯಿತು.

'ಮನೆಗೆ ಇನ್ಶೂರೆನ್ಸ್ ಇದೆ... ಆದರೆ...' ಯಾರೊಂದಿಗೋ ಫೋನಿನಲ್ಲಿ ಹೇಳುತ್ತಿದ್ದ ಶಶಾಂಕ್. ಮುಂದೆ ಮಾತುಗಳು ಕೇಳಿಸದೆ ಗುಂಯ್... ಎಂದು ಕಿವಿ ಮುಚ್ಚಿಹೋಗುವಷ್ಟು ಯಾವುದೋ ಶಬ್ದವಾಯಿತು.

ಅಗ್ನಿಶಾಮಕ ದಳದ ಹೆಲಿಕಾಪ್ಟರೊಂದು ಬುಗ್ಗನೆ ಏಳುತ್ತಿರುವ ಬೆಂಕಿಯನ್ನು ಆರಿಸುವ ಔಷಧವನ್ನು ಗಾಳಿಯಲ್ಲಿ ಸಿಂಪಡಿಸಿ ಬೆಟ್ಟದ ಸುತ್ತ ಜುಂಯ್... ಜುಂಯ್... ಎಂದು ತಿರುಗುತ್ತಿದೆ.

ಆ ಔಷಧಿಯಿಂದಾಗಿ ಸುತ್ತಲೂ ಗಾಳಿಯಲ್ಲಿ ಪುಡಿಯಂತಹ ಪದಾರ್ಥ ಗುಲಾಬಿ ಬಣ್ಣದಲ್ಲಿ ತೇಲಿಬರುತ್ತ ಉಸಿರು ಕಟ್ಟುವಂತಾಗುತ್ತಿದೆ.

ಕಾರು ಬೀದಿ ಕೊನೆಯಲ್ಲಿ ತಿರುಗುವಾಗ ಮಾಸ್ಕ್ ಹಾಕಿಕೊಂಡು ಲಿಂಡಾ ಅವರ ಫ್ರಂಟ್ ಲಾನ್ ಬಳಿ ನಿಲ್ಲಿಸುವಂತೆ ಹೇಳಿ ತಕ್ಷಣ ಅವರ ಬಾಗಿಲ ಬಳಿ ಓಡಿದೆ. ಊಹೂಂ... ಮನೆಯಲ್ಲಿಲ್ಲ. ಮನೆಯ ಸುತ್ತಮುತ್ತ ಹುಡುಕಿದೆ. ಅವರು ಆಗಲೇ ಹೊರಟುಬಿಟ್ಟಂತಿದೆ.

ಅಯ್ಯೋ, ಅವರು ಎಲ್ಲಿ ಹೋದರೋ ತಿಳಿದಿದ್ದರೆ ಚೆನ್ನಾಗಿತ್ತು ಎಂದು ನನ್ನಲ್ಲೇ ಗೊಣಗಿಕೊಳ್ಳುತ್ತ ಕಾರು ಹತ್ತಿದೆ. 'ಈ ದೇಶದಲ್ಲಿ ಎಷ್ಟೇ ಸ್ನೇಹಿತರಾದರೂ ಬಾಗಿಲ ಹೊರಗೇ. ಇಷ್ಟು ಅಪಾಯ